ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿಮಂತ್ರಿಗಳು).—

ಅ) ವರ್ಷ — ಖರ್ಚು ಮಾಡಲಾದ ಹಣ

೧೯೮೫–೮೬	— — ೧೮೮.೭೦ ಕೋಟಿ ರೂಪಾಯಿಗಳು.
೧೯೮೬–೮೭	— — ೨೦೯.೧೫ ಕೋಟಿ ರೂಪಾಯಿಗಳು.
೧೯೮೭–೮೮	— — ೧೭೦.೨೦ ಕೋಟಿ ರೂಪಾಯಿಗಳು.
೧೯೮೮–೮೯	— — ೭೯.೩೪ ಕೋಟಿ ರೂಪಾಯಿಗಳು.

(ಆಗಸ್ಟ್ ೮೮ ರವರೆಗೆ)

ಆ) ಪ್ರಗತಿಯಲ್ಲಿರುವ ಯೋಜನೆಗಳಿಗೆ ಈ ವರ್ಷ ಮತ್ತು ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಅನುದಾನ ನೀಡಿ ಯೋಜನೆಗಳ ಕೆಲಸಗಳನ್ನು ತ್ವರಿತಗತಿಯಲ್ಲಿ ಮುಗಿಸಲು ಎಲ್ಲಾ ಪ್ರಯತ್ನವನ್ನು ಮಾಡಲಾಗುವುದು.

ಇ) ಬರುವ ವರ್ಷಗಳಲ್ಲಿ ಹೊಸ ಯೋಜನೆಗಳನ್ನು ಪ್ರಾರಂಭಿಸಿ, ಕೃಷ್ಣ ನದಿ ನೀರಿನ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

ಈ) ವಿವರಗಳನ್ನು ಕೆಳಗೆ ನಮೂದಿಸಲಾದ ಪಟ್ಟಿಯಲ್ಲಿ ನೀಡಲಾಗಿದೆ,

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಅಂದಾಜು ಮೌಲ್ಯ (ಅಂಕಿಗಳು ಕೋಟಿ ರೂ. ಗಳಲ್ಲಿ)
೧)	ಕೃಷ್ಣಾ ಮೇಲ್ದಂಡೆ ಯೋಜನೆ	೬೫೦
೨)	ಮಾರ್ಕಂಡೇಯ ಯೋಜನೆ	೭೫
೩)	ರಾಂತಳ್ ಏತ ನೀರಾವರಿ ಯೋಜನೆ	೫೪
೪)	ಭೀಮಾ ಯೋಜನೆ	೧೦೮
೫)	ಭೀಮಾ ಏತ ನೀರಾವರಿ ಯೋಜನೆ	೭೨
೬)	ಭದ್ರಾ ಮೇಲ್ಕಂಡೆ ಯೋಜನೆ	೩೭೭
೭)	ತುಂಗಾ ಏತ ನೀರಾವರಿ ಯೋಜನೆ	೨೩೪
೮)	ಕಾಗ್ನ ಯೋಜನೆ	೨೫
೯)	ಗಂಧೋರಿನಾಲಾ	೨೮
೧೦)	ಮಧುಗಮಸೂರ್	೧೭
೧೧)	ಇತರ ಯೋಜನೆಗಳು	೧೧೦
	ಒಟ್ಟು (ಕೋಟಿ ರೂ. ಗಳಲ್ಲಿ)	೨೭೫೦

ದೇವನೂರು ಎಡ ಮತ್ತು ಬಲದಂಡೆ ನಾಲೆಯ ಬಗ್ಗೆ

೯೫೯ (೩೦೯) ಶ್ರೀ ಮತಿ ಕೆ. ಸುಮಾ ಪಸಂತ (ವಿರಾಜಪೇಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ದೇವನೂರು ಗ್ರಾಮದಲ್ಲಿ ನಿರ್ಮಿಸಲಾದ '' ದೇವನೂರು ಎಡ ಮತ್ತು ಬಲದಂಡೆ ಕೆಲಸ '' ಈಗ ಯಾವ ಹಂತದಲ್ಲಿದೆ ?

ಆ) ಸದರಿ ಕಾಮಗಾರಿಯನ್ನು ಕೈಬಿಡಲಾಗಿದೆ ಎನ್ನುವುದು ನಿಜವೆ, ಹಾಗಿದ್ದಲ್ಲಿ ಕಾರಣವೇನು ?

ಇ) ಈ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ, ಹಾಗೂ ಇಷ್ಟರವರೆಗೂ ಖರ್ಚಾದ ಮೊತ್ತ ವೆಷ್ಟು ?

ಈ) ವೀರಾಜಪೇಟೆ ತಾಲ್ಲೂಕಿನ ಒಡ್ಡರ ಮಡುಕೆರೆಯ ಕೆಲಸವು ಯಾವ ಹಂತದಲ್ಲಿದೆ ?

ಉ) ೧೯೮೭–೮೮ ನೇ ಸಾಲಿನಲ್ಲಿ ಮೇಲ್ಕಂಡ ಕೆಲಸಕ್ಕೆ ಮಂಜೂರಾದ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡ ಹಾಗೂ ನೀರಾವರಿ ಸಚಿವರು).—

ಅ) ಈ ಕೆಲಸವು ೧೯೧೮ ರಲ್ಲಿಯೇ ನಿರ್ಮಾಣವಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ಕೆಲಸವು ಬಹಳ ಹಿಂದೆಯೇ ನಿರ್ಮಾಣವಾಗಿದ್ದು ಮಾಹಿತಿಯು ಇಷ್ಟು ಕಾಲಾನಂತರ ಲಭ್ಯವಿಲ್ಲ.

ಈ) ಒಡ್ಡರ ಮಡುಕೆರೆಯ ಏರಿ ಮತ್ತು ಕೋಡಿ ಕೆಲಸವು ಮುಗಿದಿದ್ದು, ಕಾಲುವೆ ನಿರ್ಮಾಣದ ಸಮಯದಲ್ಲಿ ಭೂಸ್ವಾಧೀನತೆಯು ತೊಂದರೆಯಿಂದಾಗಿ ಕೆಲಸವು ಸ್ಥಗಿತಗೊಂಡಿದೆ.

ಉ) ೫೦,೦೦೦ ರೂ. ಗಳು.

ಶಿಕಾರಿಪುರ - ಮಾಸೂರು ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವ ಬಗ್ಗೆ

೯೪೪ (೩೦೪೬) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿಕಾರಿಪುರ-ಮಾಸೂರು ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ೧೯೮೭-೮೮ನೇ ಸಾಲಿನಲ್ಲಿ ತಾರ್ ರಸ್ತೆ ಮಾಡಲು ಹಣ ಮಂಜೂರಾಗಿತ್ತೆ ಹಾಗಿದ್ದಲ್ಲಿ ಅದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಇ) ೧೯೮೮-೮೯ನೇ ಸಾಲಿನಲ್ಲಿ ಈ ರಸ್ತೆಗಾಗಿ ಹಣ ಮಂಜೂರಾಗಿದೆಯೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಶಿಕಾರಿಪುರ-ಮಾಸೂರು ರಸ್ತೆಯ ಕೆಲವು ಭಾಗಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ೪೦,೦೦೦ ರೂ. ಗಳ ಅಂದಾಜು ಪಟ್ಟಿಗೆ ೧ ಕಿ.ಮಿ. ನಿಂದ ೨ ಕಿ. ಮಿ. ನಲ್ಲಿ ಆಯ್ದ ಭಾಗಗಳಿಗೆ ಮರು ಡಾಂಬರು ಮಾಡಲು ಮಂಜೂರಾಗಿದ್ದು, ಇದಕ್ಕಾಗಿ ೪,೨೦೦ ರೂ. ಗಳನ್ನು ವಾರ್ಜ್ ೮೮ರ ವರೆಗೆ ಖರ್ಚು ಮಾಡಲಾಗಿದೆ.

ಇ) ಯೋಜನೇತರ ಶೀರ್ಷಿಕೆಯಡಿಯಲ್ಲಿ ೧೯೮೮-೮೯ನೇ ಸಾಲಿನಲ್ಲಿ ೨.೧೦ ಲಕ್ಷ ರೂ. ಗಳು ಮಂಜೂರಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಗುತ್ತಿಗೆ ಶಿಕ್ಷಕರನ್ನು ಖಾಯಂಗೊಳಿಸುವ ವಿಚಾರ

೧೪೪೯ (೨೬೫೯) ಶ್ರೀ ಜೆ. ಎಸ್. ಆಚಾರ್ (ಬೈಂದೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗುತ್ತಿಗೆ ಶಿಕ್ಷಕರನ್ನು ಖಾಯಂಗೊಳಿಸುವ ವಿಚಾರದಲ್ಲಿ ಸರ್ಕಾರದವರು ಹಿಂದೆ ಆಶ್ವಾಸನೆ ಇತ್ತಿದ್ದರೂ ಈವರೆವಿಗೂ ಕಾರ್ಯರೂಪಕ್ಕೆ ತರದಿರಲು ಕಾರಣಗಳೇನು ?